ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 13.

ಬೆಂಗಳೂರು, ಗುರುವಾರ, ಏಪ್ರಿಲ್ ತಾ|| 1, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ಟು, ರಿಜಿಸ್ಟ್ರೇರ್ಸ ವ ಎಡ್ಯುಕೇರ್ಸ ಇನ್ಸ್‌ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇರ್ಷಗಳು ಮತ್ತು ಅವುಗಳಿಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಪ್ರಕಟನೆ.

ವಿಶ್ವನಾಥ ಪರ್ಟಕರ್ ಮಾಧವರಾವ್, ಸಿ. ಐ. ಇ. ಯವರು ಉದ್ಯೋಗದಿಂದ ನಿವೃತ್ತರಾದ ಪ್ರಯುಕ್ತ ಮೈಸೂರು ಸಂಸ್ಥಾನದ ದಿವಾ ಕೆಲಸವು ಖಾಲಿಯಾದುದರಿಂದ ನಾವು ತಂಜಾವೂರು ಮಾಧವರಾವ್ ಆನಂದರಾವ್, ಬಿ. ಎ. ಯವರ ರಾಜಭಕ್ತಿ, ಕಾರ್ಯದಕ್ಷತೆ ಮತ್ತು ವಿವೇಕ ಇವುಗಳಲ್ಲಿ ಅಭಿಮಾನವಿಟ್ಟು ಮೈಸೂರು ಸಂಸ್ಥಾನದ ದಿವಾ ಉದ್ಯೋಗಕ್ಕೆ ಮೇಲ್ಕಂಡ ತಂಜಾವೂರು ಮಾಧವರಾವ್ ಆನಂದರಾವ್, ಬಿ. ಎ. ಯವರನ್ನು ಈ ಮೂಲಕ ಮೊಕರರ್ ಮಾಡಿರುತ್ತೇವೆ; ಮತ್ತು ಉದ್ಯೋಗಪ್ರಯುಕ್ತ ಮಂತ್ರಾಲೋಚನಾಸಭಾಧ್ಯಕ್ಷರಾಗಿಯೂ ಸಹ ಮೇಲ್ಕಂಡ ತಂಜಾವೂರು ಮಾಧವರಾವ್ ಆನಂದರಾವ್, ಬಿ. ಎ. ಯವರನ್ನು ನಾವು ಮೊಕರರ್ ಮಾಡಿರುತ್ತೇವೆ.

ಇದೇ 1909ನೆ ಇಸವಿ ಏಪ್ರಿಲ್ ಗುರ್ವೇ ತಾರೀಖಿನ ದಿವಸ ಮೈಸೂರಲ್ಲಿ ನಮ್ಮ ಮೊಹರ್ ದಸ್ತಖತ್ ನಿಶಿ ಕೊಡಲ್ಪಟ್ಟಿರುತ್ತದೆ.

ಮೊಹರು.

ಕೃಷ್ಣರಾಜ ಒಡೆಯರ್.

ತಾರೀಖು 1ನೆ ಏಪ್ರಿಲ್ 1909.

ನಂ. ಜ. 5667—ಜ. ವಿ. 282-03-1, ಶ್ರೀಮ ನ್ಮೈಸೂರು ಮಹಾರಾಜ ರಾಜಾಸಾಹೇಬ್ಬರುಹದುರವರು ಮಿ|| ಕೆ. ಪಿ. ಪುಟ್ಟಣ್ಣ ಸೆಟ್ಟ್ಯಯವರನ್ನು ಮೊದಲನೆ ಕೌನ್ಸಿಲರನ್ನಾಗಿಯೂ, ಮಿ|| ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್. ರವರನ್ನು ಎರಡನೆ ಕೌನ್ಸಿಲರನ್ನಾಗಿಯೂ ನೇಮಕರ್ ಮಾಡಿ ಇರುತ್ತಾರೆ.

ತಾರೀಖು 17ನೆ ಮಾರ್ಚಿ 1909.

ನಂ. 9080—ಸ್ಯಾನಿಟೆರಿ 85-08-9, ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕಿನ ಬೇಲೂರು ಪಟ್ಟಣಕ್ಕೆ ಶ್ರೀ ಚನ್ನಕೇಶವ ಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 27ನೆ ತಾರೀಖಿನಿಂದ 1909ನೆ ಏಪ್ರಿಲ್ 7ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 19ನೆ ಮಾರ್ಚಿ 1909.

ನಂ. 9131—ಸ್ಯಾ. 61—08—76, ಫೀನಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ 10—3—09ನೆ ಮಜ್ಕೂರ್ 175 ಪಿ. ನೆ ನಂಬರು ಇಂಡಾರ್ಸುಮೆಂಟನೊಡನೆ ಬಂದ ಮದರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್‌ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ.

ಇಸ್ತಿಹಾರ್‌ನಾಮೆ, ನಂ. 69 ಪಿ. ತಾರೀಖು 22ನೆ ಫೆಬ್ರವರಿ 1909.

ಮಧುರಾ ಡಿಸ್ಟ್ರಿಕ್ಟ್ ಮಧುರೆಯಲ್ಲಿಯೂ ಅದಕ್ಕೆ ಸೇರಿದ ಉಪ ನಗರಗಳಲ್ಲಿಯೂ ಮುಂದೆ ನಡೆಯುವ ಚಿತ್ರೆ ಮತ್ತು ಕಳ್ಳಅಳಗಾರ್ ಉತ್ಸವಗಳಿಗೂ ಮತ್ತು ದನಗಳ ಪರಿಷೆಗೂ ಕೊಯಿಮುತ್ತೂರು, ನೀಲಗಿರಿ, ಸೇಲಂ ಮತ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ಗಳ ಪೈಕಿ ಪ್ಲೇಗು ವ್ಯಾಧಿಯ ಸೋಂಕು ತಗಲಿದ ತಾಲ್ಲೂಕುಗಳಿಂದಲೂ, ಮೈಸೂರು ಸೀಮೆಯಿಂದಲೂ ಮತ್ತು ಪ್ಲೇಗು ವ್ಯಾಧಿಯ ಸೋಂಕು ಇರುವುದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ ಬರುವ ಜನರನ್ನು ಅಲ್ಲಿಗೆ ಬಿಟ್ಟರೆ ಅಲ್ಲಿ ಪ್ಲೇಗು ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾಸವೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸವೇತರಾದ ಗವರ್ನರವರು ಮೇಲ್ಕಂಡ ಉತ್ಸವಕ್ಕೆ ಸದರೀ ಸ್ಥಳಗಳಿಂದ ಯಾರೂ 1909ನೆ ಇಸವಿಯ ಏಪ್ರಿಲ್ ಮಾಹೆ 19ನೆ ತಾರೀಖಿನ ಲಾಗಾಯಿತು 1909ನೆ ಮೇ ಮಾಹೆ 12ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಹೋಗಕೂಡದೆಂದು ನಿಷೇಧಿಸಿರುತ್ತಾರಲ್ಲದೆ, ಸದರೀ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್ ಸ್ಟೇಷನ್‌ಗಳಲ್ಲಿ ರೈಲ್ ಮೂಲಕ ಪ್ರಯಾಣ ಮಾಡಬೇಕೆಂದಿರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ ;

ಈ ಸ್ಟೇಷನ್‌ಗಳಿಂದ :—ಮದರಾಸು ಮತ್ತು ದಕ್ಷಿಣ ಮರಾಟ ರೈಲ್ವೆಯ ಗುಡುಪಲ್ಲಿ, ಕುಪ್ಪಂ, ಮುಳಾನೂರು, ಮತ್ತು ಪಾಕೂರು ; ದಕ್ಷಿಣ ಇಂಡಿಯನ್ ರೈಲ್ವೆಯ ಬರಗೂರು, ಕೊಯಿಮುತ್ತೂರು, ಕಂಡಿಕುಪ್ಪಂ, ಕೃಷ್ಣಗಿರಿ, ಮಂಗಳೂರು, ವೆಟ್ಟುಪಾಳ್ಯಂ, ಪೆರಿಯಗೆರಂ, ಪೆರಿಯಕಂಡಿಲಿ, ಪೋದನೂರು, ಸಿಂಗನಲ್ಲೂರು ಮತ್ತು ತುಡಿಯಲೂರು ; ನೀಲಗಿರಿ ರೈಲ್ವೆಯ ಕುನ್ನೂರು, ಪರ್ನಹಿಲ್, ಕೇಟ, ಉದಕಮಂಡಲ ಮತ್ತು ವೆಲ್ಲಿಂಗ್ಟನ್.

ಈ ಸ್ಟೇಷನ್‌ಗಳಿಗೆ :—ಸದರ್ನ್ ಇಂಡಿಯನ್ ರೈಲ್ವೆಯ ಅಯ್ಯಲೂರು, ವಾಡವುದುರ, ತಾವುರೈಪಾಡಿ, ಡಿಂಡಿಗಲ್, ಅಂಬಾತುರೆ, ಕೂಡೈಕನಾಲ್ ರಸ್ತೆ, ವಡ್ಡಿಪಟ್ಟಿ, ಷೋಲವಂಡನ್, ಶಾವುಯನಲ್ಲೂರು, ಮಧುರಾ ಸೇತುವೆ, ಮಧುರೆ, ಪಳುಮಲೆ, ತಿರುಪ್ಪರಾಕುಂಡ್ರಂ, ಕಪ್ಪಲೂರು, ತಿರುಮಂಗಲಂ, ಸಿವಾರಕೋಟೆ ಮತ್ತು ಕೆಲ್ಲಿಗುಡಿ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಉತ್ಸವಕ್ಕೆ ಹೋಗುವವರನ್ನು ವಾಪಸ್ ಕಳುಹಿಸಲಾದೀತು.

ತಾರೀಖು 24ನೆ ಮಾರ್ಚಿ 1909.

ನಂ. 9281—ಸ್ಯಾ. 61-08-80, ಫೀನಹೊಂದಿದೆ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ 1909ರ ಮಾರ್ಚಿ 18ನೆ ಮಜ್ಕೂರಂ 203—ಪಿ. ನೆ ನಂಬರ್ ಇಂಡಾರ್ಸುಮೆಂಟಿನೊಡನೆ ಬಂದ ಮದರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್‌ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ

ಬಳ್ಳಾರಿ ಡಿಸ್ಟ್ರಿಕ್ಟ್ ಹೊಸಪೇಟೆ ತಾಲ್ಲೂಕು ಹಂಪೆಯಲ್ಲಿ ಮುಂದೆ ನಡೆಯುವ ಶ್ರೀ ವಿರೂಪಾಕ್ಷಸ್ವಾಮಿ ರಥೋತ್ಸವಕ್ಕೆ 1909ನೆ ಇಸವಿ ಮಾರ್ಚಿ 23ನೆ ತಾರೀಖಿನ ಲಾಗಾಯಿತು ಏಪ್ರಿಲ್ 5ನೆ ತಾರೀಖಿನ ವರಿಗೆ (ಉಭಯ ದಿನಗಳೂ ಸೇರಿ) ಜನಗಳನ್ನು ಬಿಡಕೂಡದೆಂದು 1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾ ಸವೇತರಾದ ಗವರ್ನರವರು ವಿಧಿಸಿರುತ್ತಾರಲ್ಲದೆ, ಸದರೀ ತಾರೀಖುಗಳ ಮಧ್ಯೆ ರೈಲ್ ಮೂಲಕ ಪ್ರಯಾಣ ಮಾಡಬೇಕೆಂದಿರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ ;

ಈ ಸ್ಟೇಷನ್‌ಗಳಿಗೆ :—ಮದರಾಸು ಮತ್ತು ದಕ್ಷಿಣ ಮರಾಟೆ ರೈಲ್ವೆಯ ಮುನೀರಾಬಾದ್, ಹೊಸಪೇಟೆ, ಪಾಪಿನಾಯಕನ ಹಳ್ಳಿ, ಗಾಡಿಗನೂರು, ತೋರಣಗಲ್ಲು, ದಾರೋಜಿ, ಮತ್ತು ಕುಡತಿನಿ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಉತ್ಸವಕ್ಕೆ ಹೋಗುವವರನ್ನು ವಾಪಸ್ ಕಳುಹಿಸಲಾದೀತು.

ತಾರೀಖು 29ನೆ ಮಾರ್ಚಿ 1909.

ನಂ. 9393—ಸ್ಯಾನಿಟೆರಿ 13-08-8, ಕೋಲಾರ ಡಿಸ್ಟ್ರಿಕ್ಟ್ ಶ್ರೀನಿವಾಸಪುರ ತಾಲ್ಲೂಕಿನ ಎಲ್ಕೂರು ಗ್ರಾಮಕ್ಕೆ ಶ್ರೀ ಕೋದಂಡರಾಮಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಏಪ್ರೆಲ್ 3ನೆ ತಾರೀಖಿನಿಂದ 1909ನೆ ಏಪ್ರೆಲ್ 12ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 27ನೆ ಮಾರ್ಚ್ 1909.

ನಂ. 9337—ಸ್ಯಾನಿಟೆರಿ 76-08-46, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರಗ್ಯುಲೇಷ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು :—

ಸ್ಥಳ.				ತಾಲ್ಲೂಕು.
ಅಯ್ಯನಪುರ	...	...	...	ಚಾಮರಾಜನಗರ.
ಮಾರಗೊಂಡನಹಳ್ಳಿ	...	...	...	ಎಡತೊರೆ.
ಕ್ಯಾರನಕಟ್ಟೆ	...	...	...	ಗುಂಡ್ಲುಪೇಟೆ.
ಅಗಟುಗಂಡನಹಳ್ಳಿ	...	...	...	ಡಿಟೋ
ಕೋತನೂರು	...	...	...	ಡಿಟೋ
ಕಿರಗವಾಲ್	...	...	...	ಮಳವಳ್ಳಿ.
ಮುತ್ತನಹಳ್ಳಿ	...	...	...	ಡಿಟೋ
ದೇವರಹಳ್ಳಿ	...	...	...	ಡಿಟೋ
ತರಗನಹಳ್ಳಿ	...	...	...	ನಂಜನಗೂಡು.
ಹುಣಸೂರು	...	...	...	ಹುಣಸೂರು.

ತಾರೀಖು 25ನೆ ಮಾರ್ಚ್ 1909.

ನಂ. ಜು. 2836—ಪೊಲೀಸ್ 130-08-3, ಸ್ರ 1905ನೆ ಇಸವಿ ಡಿಸೆಂಬರ್ 26ನೆ ಮರ್ಕ್ಯಂನ ಜು. 1782—ಪೊಲೀಸ್ ಮಿಸ್. 65ನೆ ನಂಬರ್ ಇಸ್ತಿಹಾರ್‌ನಾಮೆಯೊಂದಿಗೆ ಪ್ರಸಿದ್ಧಪಡಿಸಿರುವ ನಿಬಂಧನೆಗಳ ಪೈಕಿ 1ನೆ ನಿಬಂಧನೆಯ 19ನೆ ಕಲಮಿಗೆ ಇದರಡಿ ನಮೂದಿಸಿರುವದನ್ನು ಸೇರಿಸಿಕೊಳ್ಳಬೇಕೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸಾಹೇಬ್ರ್ ಹದರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ :—

"ಮತ್ತು ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರವರ ಅಸಿಸ್ಟೆಂಟರು."

ತಾರೀಖು 27ನೆ ಮಾರ್ಚ್ 1909.

ನಂ. 9365—ಮ್ಯು. 381-08-2, ಸ್ರ 1906ನೆ ಇಸವಿಯ 7ನೆ ರೆಗ್ಯುಲೇಷ್ ಅದ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 18ನೆ ಪ್ರಕರಣವನ್ನನುಸರಿಸಿ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರಾಗಿದ್ದು ರಾಜೀನಾಮೆಯನ್ನು ಕೊಟ್ಟ ಮಹಾರಾಜಾ ಕಾಲೇಜ್ ಪ್ರಿನ್ಸಿಪಲರವರಾದ ಮಿ॥ ಜೆ. ವಿಯರ್ ಯವರ ಸ್ಥಾನದಲ್ಲಿ ರೆವರೆಂಡ್ ಎಚ್. ಗಲಿಫರ್ಡ್ ರವರನ್ನು ಮ್ಯುನಿಸಿಪಲ್ ಕೌನ್ಸಿಲರಾಗಿ ನೇಮಕ ಮಾಡಿದೆ.

ಹುಕುಂ ಖಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ.

ಮಿಲಿಟೆರಿ.

ಇಸ್ತಿಹಾರ್ ನಾಮೆ.

ತಾರೀಖು 26ನೆ ಮಾರ್ಚ್ 1909.

ನಂ. ಮಿಲಿಟೆರಿ. 874-5—149-08-3, ಘನವನ್ನು ಹೊಂದಿದ ಶ್ರೀಮನ್ ಮೈಸೂರು ದೇಶದ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟ್ ಕಮಿಷನ್ಡ್ ರ್ಯಾಂಕಿನಲ್ಲಿ ಈ ಕೆಳಗೆ ನಮೂದಿಸಲ್ಪಡುವ ಬಡ್ತಿಗಳನ್ನು 1908ನೆ ಇಸವಿ ಡಿಸೆಂಬರು 28ನೆ ತಾರೀಖಿನ ಲಾಗಾಯಿತು ಮಂಜೂರ್ಮಾಡಿರುತ್ತಾರೆ :—

ಹೆಸರು.	ರ್ಯಾಂಕಿನಿಂದ.	ರ್ಯಾಂಕಿಗೆ.
ಮಹಮದ್ ನಸಿರ್ ಅಹಮದ್ ...	ಟ್ರೂಪ್ ಕವ್ಯಾಂಡರ್ 4ನೆ ಗ್ರೇಡ್ ಜಮಾದಾರ್.	ಟ್ರೂಪ್ ಕವ್ಯಾಂಡರ್ 3ನೆ ಗ್ರೇಡ್ ಜಮಾದಾರ್.
ಮಿರ್ ಸದುದ್ದೀ ...	ಡಿಟೋ 5ನೆ ಗ್ರೇಡ್ ಜಮಾದಾರ್ ...	ಡಿಟೋ 4ನೆ ಗ್ರೇಡ್ ಜಮಾದಾರ್.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಿಟೆರಿ.